28/7/4

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–560003

## KARNATAKA SECONDARY EDUCATION EXAMINATION BOARD
## MALLESHWARAM, BENGALURU-560003

**ಕೆ.ಓ.ಎಸ್. ಪರೀಕ್ಷೆ ಜುಲೈ –2021**

**KOS EXAMINATION JULY-2021**

| | | |
|---|---|---|
| Subject / ವಿಷಯ | : | Economics<br>ಅರ್ಥಶಾಸ್ತ್ರ |
| Subject Code / ವಿಷಯ ಸಂಕೇತ | : | 214-NS |
| Maximum Marks / ಗರಿಷ್ಠ ಅಂಕಗಳು | : | 100 |
| Duration of Exam / ಪರೀಕ್ಷೆ ಅವಧಿ | : | 3 hours / 3 ಗಂಟೆಗಳು |
| Time alloted to read the Instructions / ಸೂಚನೆಗಳನ್ನು ಓದಲು ನಿಗಧಿಗೊಳಿಸಿರುವ ಅವಧಿ : | : | 15 minutes / 15 ನಿಮಿಷಗಳು |
| Timings / ಸಮಯ | : | 9:30 AM – 12:45 PM |

SEAL

## ಅಭ್ಯರ್ಥಿಗೆ ಸಾಮಾನ್ಯ ಸೂಚನೆಗಳು / General Instructions to the Candidate

1. ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿರುವಂತೆ ಉತ್ತರ ಪತ್ರಿಕೆಯಲ್ಲಿ ನೀಡಿರುವ ಸ್ಥಳದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.
   Candidate should write their register number on the answer booklet as printed in their hall ticket.

2. ಅಭ್ಯರ್ಥಿಯು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ, ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ನೋಂದಣಿ ಸಂಖ್ಯೆ ಬರೆಯತಕ್ಕದ್ದು.
   Candidate should write their register number on the additional answer sheets in the space provided.

3. ಅಭ್ಯರ್ಥಿಯು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೊಂದಣಿ ಸಂಖ್ಯೆ, ಗುರುತು, ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ ಪತ್ರಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
   Candidate should not write register number, mark, sign or any other information in the answer booklet except in the specified place. In case, if found any information in the sheets of the answer scripts, such answer scripts will not be considered for evaluation.

4. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
   Candidate found to be indulged in malpractice during examination and violating examination instructions, action will be taken against such candidate as per the examination rules and his/her answer booklet will not be considered for evaluation.

*ಸೂಚನೆಗಳು :* *1. ಎಲ್ಲಾ ಪ್ರಶ್ನೆಗಳೂ ಕಡ್ಡಾಯ.*

*2. ಪ್ರಶ್ನೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಮೂದಿಸಿ.*

*3. ಉತ್ತರಗಳು ನೇರವಾಗಿರಲಿ ಹಾಗೂ ಸಂಕ್ಷಿಪ್ತವಾಗಿರಲಿ.*

**I. ಕೆಳಕಂಡ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಉತ್ತರದಿಂದ ತುಂಬಿ :** **(5 × 1 = 5)**

1) ಮಾನವನ ಮೂಲಭೂತ ಅವಶ್ಯಕತೆಗಳು ________

2) ಸಕ್ಕರೆ ಕಾರ್ಖಾನೆಯಲ್ಲಿ ಉದ್ಯೋಗನಿರತರಾಗಿರುವ ಜನರು ________ ವಲಯದ ಉದ್ಯೋಗಿಗಳಾಗಿದ್ದಾರೆ.

3) ರಫ್ತುದಾರ ತನ್ನ ಉತ್ಪನ್ನವನ್ನು ________ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾನೆ.

4) ನ್ಯಾಯಬೆಲೆ ಅಂಗಡಿಗಳು ________ ಮಾರುಕಟ್ಟೆಗೆ ಉದಾಹರಣೆ.

5) ಹೆಚ್ಚಿನ ಬೆಲೆಯಲ್ಲಿ ಖರೀದಿದಾರರು ________ ಪ್ರಮಾಣದಲ್ಲಿ ಖರೀದಿಸಲು ಬಯಸುತ್ತಾರೆ.

**II. ಕೆಳಗಿನ ವಾಕ್ಯಗಳು ಸರಿಯೋ ಅಥವಾ ತಪ್ಪೋ ತಿಳಿಸಿ :** **(5 × 1 = 5)**

6) ಬಯಕೆಗಳ ಬೆಳವಣಿಗೆಯು ಇತರರ ಅವಲಂಬನೆಯನ್ನು ಹೆಚ್ಚಿಸಿದೆ.

7) ಜನಸಂಖ್ಯಾ ಏರಿಕೆಯು ಸರಕು ಮತ್ತು ಸೇವೆಗಳಿಗಿರುವ ಬೇಡಿಕೆಯನ್ನು ಕಡಿಮೆ ಮಾಡುತ್ತದೆ.

8) 'ಮಾರುಕಟ್ಟೆ ಬೆಲೆ' ಎಂದರೆ ಮಾರುಕಟ್ಟೆಯಲ್ಲಿ ಸರಕು ಮಾರಾಟವಾಗುವ ಬೆಲೆ ಎಂದರ್ಥ.

9) ಕೈಗಾರಿಕಾ ಕ್ರಾಂತಿ ಮೊಟ್ಟಮೊದಲಿಗೆ ಸಂಭವಿಸಿದ ರಾಷ್ಟ್ರ ಬ್ರಿಟನ್.

10) ಶಬ್ದ ಮಾಲಿನ್ಯವು ಕೈಗಾರಿಕಾ ಕ್ರಾಂತಿಯ ಅವಶ್ಯಕ ದೋಷವಾಗಿದೆ.

**III. ಕೆಳಗಿನವುಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ :** **(5 × 1 = 5)**

11) ಬೆಂಬಲ ಬೆಲೆಗಳನ್ನು ನಿರ್ಧರಿಸುವವರು:

ಎ) ಎಲ್ಲಾ ಜನರು

ಬಿ) ಅನುಭೋಗಿಗಳು

ಸಿ) ಸರ್ಕಾರ

ಡಿ) ಸಗಟು ವ್ಯಾಪಾರಿಗಳು

12) ಸಾರ್ವಜನಿಕ ವಿತರಣೆ ವ್ಯವಸ್ಥೆಯಿಂದ ಇವರು ಪ್ರಯೋಜನ ಪಡೆದುಕೊಳ್ಳುತ್ತಾರೆ

ಎ) ರೈತರು

ಬಿ) ಎಲ್ಲಾ ಜನರು

ಸಿ) ಕೆಲವು ಬಡಜನರು ಮಾತ್ರ

ಡಿ) ಎಲ್ಲಾ ಶ್ರೀಮಂತರು

13) ಶ್ರೀಮಂತ ಮತ್ತು ಬಡ ರಾಷ್ಟ್ರಗಳೆಂದು ನಿರ್ಧರಿಸಲು ಈ ಕೆಳಗಿನವುಗಳಲ್ಲಿ ಯಾವುದು ಪ್ರಮುಖ ಆಧಾರ?

ಎ) ತಲಾದಾಯ  ಬಿ) ವಿಸ್ತೀರ್ಣ

ಸಿ) ಹವಾಮಾನ  ಡಿ) ಜಾಗ

14) ಈ ಕೆಳಗಿನ ಯಾವ ರಾಜ್ಯ ಹೆಚ್ಚು ಜನನ ದರವನ್ನೊಂದಿದೆ?

ಎ) ಮಹಾರಾಷ್ಟ್ರ  ಬಿ) ಕೇರಳ

ಸಿ) ಉತ್ತರಪ್ರದೇಶ  ಡಿ) ಪಂಜಾಬ್

15) ಸಾರ್ವಜನಿಕ ವಲಯವನ್ನು ನಡೆಸುವವರು ಮತ್ತು ನಿರ್ವಹಿಸುವವರು

ಎ) ಸರ್ಕಾರ  ಬಿ) ಬಂಡವಾಳಶಾಹಿಗಳು

ಸಿ) ಸಹಕಾರಿ ಸಂಘಗಳು  ಡಿ) ಬಹುರಾಷ್ಟ್ರೀಯ ಕಂಪನಿಗಳು

[ Turn over

(5 × 1 = 5)

IV. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

16)

| 'ಎ' | 'ಬಿ' |
| --- | --- |
| 1) ವ್ಯಾಪಾರ ಸೇವೆ | ಎ) ಟಿ.ವಿ. |
| 2) ಶಿಕ್ಷಣ ಸೇವೆ | ಬಿ) ಹಡಗು |
| 3) ಸಾರಿಗೆ ಸೇವೆ | ಸಿ) ಆಸ್ಪತ್ರೆಗಳು |
| 4) ಮಾಹಿತಿ ಮತ್ತು ಮನರಂಜನಾ ಸೇವೆ | ಡಿ) ವಯಸ್ಕರ ಕಲಿಕಾ ಕೇಂದ್ರಗಳು |
| 5) ವೈದ್ಯಕೀಯ ಸೇವೆ | ಇ) ಸೂಪರ್ ಬಜ಼ಾರ್ |

V. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.
(10 × 1 = 10)

17) ಸರಕುಗಳು ಎಂದರೇನು?

18) ಅನುಭೋಗ ಎಂದರೇನು?

19) ಪಾಲುಗಾರಿಕೆ ಎಂದರೇನು?

20) ಕೈಗಾರಿಕಾ ಕ್ರಾಂತಿ ಎಂದರೇನು?

21) ಪ್ರೇರಣೆ ಎಂದರೇನು?

22) ಅರ್ಥಶಾಸ್ತ್ರದ ಪ್ರಕಾರ ಸೇವೆಗಳೆಂದರೇನು?

23) ಲಾಭ ಎಂದರೇನು?

24) ಬಡವರೆಂದು ಯಾರನ್ನು ಕರೆಯಬಹುದು?

25) ಚಿಲ್ಲರೆ ಮಾರಾಟಗಾರರೆಂದರೆ ಯಾರು?

26) ಮಾರುಕಟ್ಟೆಯ ಅರ್ಥ ತಿಳಿಸಿ.

VI. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ : (8 × 2 = 16)

27) ಬೆಲೆಯನ್ನು ವ್ಯಾಖ್ಯಾನಿಸಿ.

28) ದೇಶೀಯ ಮಾರುಕಟ್ಟೆಯ ವಿಧಗಳಾವುವು?

29) ಬೇಡಿಕೆಯ ನಿರ್ಧಾರಕಗಳನ್ನು ತಿಳಿಸಿ.

30) ತಲಾದಾಯ ಎಂದರೇನು? ತಲಾದಾಯದ ಸೂತ್ರ ಬರೆಯಿರಿ.

31) ಮಿಶ್ರ ಆರ್ಥಿಕತೆ ಎಂದರೇನು?

32) ಆರ್ಥಿಕತೆಯ ಪ್ರಕಾರಗಳಾವುವು?

33) ವಿಶ್ವವ್ಯಾಪಾರವನ್ನು ಪ್ರಭಾವಿಸುವ ಅಂಶಗಳಾವುವು?

34) ಸಹೋದ್ಯಮದ ವಿಧಗಳಾವುವು?

VII. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಐದು ವಾಕ್ಯಗಳಲ್ಲಿ ಉತ್ತರಿಸಿ : (8 × 3 = 24)

35) ಮುಕ್ತ ಮಾರುಕಟ್ಟೆಯ ಅನುಕೂಲ ಹಾಗೂ ಅನಾನುಕೂಲಗಳನ್ನು ವಿವರಿಸಿ.

36) ನೈಸರ್ಗಿಕ ಸಂಪನ್ಮೂಲಗಳ ವಿಧಗಳಾವುವು? ವಿವರಿಸಿ.

37) ಮಾಲಿನ್ಯ ಎಂದರೇನು? ಮಾಲಿನ್ಯದ ಪ್ರಕಾರಗಳು ಯಾವುವು? ವಿವರಿಸಿ.

38) ಜನಸಂಖ್ಯೆ ಎಂದರೇನು? ಜನಗಣತಿಯ ಬಗ್ಗೆ ಟಿಪ್ಪಣಿ ಬರೆಯಿರಿ.

39) ಶಬ್ದ ಮಾಲಿನ್ಯ ಎಂದರೇನು? ಶಬ್ದ ಮಾಲಿನ್ಯದ ಮೂಲಗಳಾವುವು?

40) ಅನುಭೋಗಿ ಸೇವೆಗಳು ಉತ್ಪಾದಕ ಸೇವೆಗಳಿಗಿಂತ ಹೇಗೆ ಭಿನ್ನವಾಗಿವೆ?

[ Turn over

41) ಕಾರ್ಮಿಕರ ಶೋಷಣೆ ತಡೆಗಟ್ಟಲು ಸರ್ಕಾರದ ಶಾಸನಾತ್ಮಕ ಕ್ರಮಗಳಾವುವು? ವಿವರಿಸಿ.

42) ವಿಶ್ವದ ಶ್ರೀಮಂತ ರಾಷ್ಟ್ರಗಳ ಸಾಮಾನ್ಯ ಲಕ್ಷಣಗಳನ್ನು ತಿಳಿಸಿ.

**VIII. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ :**

**(5 × 4 = 20)**

43) ಬಯಕೆಗಳ ಪ್ರಕಾರಗಳಾವುವು? ವಿವರಿಸಿ.

44) ಸರಕು ಮತ್ತು ಸೇವೆಗಳ ವರ್ಗೀಕರಣವನ್ನು ಸಂಕ್ಷಿಪ್ತವಾಗಿ ವಿವರಿಸಿ.

45) ಆರ್ಥಿಕ ಚಟುವಟಿಕೆಗಳ ವರ್ಗೀಕರಣವನ್ನು ಸಂಕ್ಷಿಪ್ತವಾಗಿ ತಿಳಿಸಿ.

46) ಶ್ರಮ ಎಂದರೇನು? ಶ್ರಮದ ಲಕ್ಷಣಗಳನ್ನು ತಿಳಿಸಿ.

47) 'ಉದ್ಯಮ ಸಾಹಸಿ' ಎಂದು ಯಾರನ್ನು ಕರೆಯಲಾಗುತ್ತದೆ? ಉದ್ಯಮ ಸಾಹಸಿಯ ಪ್ರಮುಖ ಕಾರ್ಯಗಳಾವುವು?

**IX. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಹತ್ತು ಅಥವಾ ಹನ್ನೆರಡು ವಾಕ್ಯಗಳಲ್ಲಿ ಉತ್ತರಿಸಿ :**

**(2 × 5 = 10)**

48) ಸಣ್ಣ ಪ್ರಮಾಣದ ಉತ್ಪಾದನಾ ಘಟಕಗಳ ಪ್ರಾಮುಖ್ಯತೆ ವಿವರಿಸಿ.

49) ಮಾರಾಟಗಾರರು ಖರೀದಿಗಾರರನ್ನು ಹೇಗೆ ಆಕರ್ಷಿಸುತ್ತಾರೆ? ವಿವರಿಸಿ.

---

Do not write on this area